ರಿಪೋರ್ಟ್ ಇನ್ನು ಅರ್ಧ ಗಂಟೆಗೆ ಸಿಗುತ್ತೆ. ಈಗ ಅದರ ಸಾರಾಂಶ ನಿಮಗೆ ಹೇಳಬಹುದೇನೊ...'

'ಹೇಳಿ, ಕೇಳೋಣ.'

'ಒಂದು, ಬಾಡಿ ಕರೆಕ್ಟಾಗಿ ಐಡೆಂಟಿಫೈ ಆಗಿದೆ. ಎರಡು, ಸಾವಿನ ರೀತಿ– ಇದು ಹೋಮಿಸೈಡ್– ಕೊಲೆ, ನೋ ಡೌಟ್ಸ್ ಎಬೌಟ್ ದಟ್. ಮೂರು, ಸಾವಿನ ಕಾರಣ... ಹರಿತವಾದ ಆಯುಧಗಳಿಂದಾದ ಯಾವುದೇ ಗಾಯಗಳಿಲ್ಲ ಬದಲಿಗೆ ಬುರುಡೆಯ ಮೇಲೆ ಲಾಸರೇಷನ್ಸ್‌ಗಳು ಇವೆ. ಅಂದರೆ ಮೊಂಡು ಆಯುಧದಿಂದ ತಲೆಗೆ ಬಿದ್ದ ಮೂರು ಬಲವಾದ ಪೆಟ್ಟುಗಳಿಂದಾದ ಗಾಯಗಳು. ಅದೇ ಸಾವಿಗೆ ಕಾರಣ, ಮೊದಲನೇ ಪೆಟ್ಟು ಹಿಂದಿನಿಂದ ನೆತ್ತಿಯ ಹತ್ತಿರ, ಓರೆಯಾಗಿ ಬಿದ್ದು, ಹಾಗೇ ಕಿವಿಯ ತನಕ ಜಾರಿ, ಉದ್ದಕ್ಕೂ ಚರ್ಮ, ಕೂದಲು, ಸ್ಕಾಲ್ಪ್ ಎಲ್ಲಾ ಕಿತ್ತ ರೀತಿ ತರಚಿದ ಗಾಯವಾಗಿದೆ. ಆ ನಂತರ ಆ ಮಹಿಳೆ ಹಿಂದಕ್ಕೆ ಕೊಲೆಗಾರನ ಕಡೆಗೆ ತಿರುಗಿರಬಹುದು, ಆಗ ಮುಂದಲೆಗೆ ಎರಡು ಮಾರಣಾಂತಿಕ ಹೊಡೆತಗಳು ಬಿದ್ದಿವೆ– ಇಟ್ ಈಸ್ ಬ್ಲಂಟ್ ವೆಪನ್ ಟ್ರೌಮ ದಪ್ಪನೆಯ ಕಬ್ಬಿಣದ ರಾಡ್ ಅಂತ ಕಾಣುತ್ತೆ. ಗಾಯದ ಜಾಗದಲ್ಲಿ ಏನೋ ಸ್ಕ್ರೂಗಳಿಗಿರುವಂಥ ಸುರುಳಿ ವಿನ್ಯಾಸ ಇದೆ, ಮೆದುಳಿಗೆ ಪೆಟ್ಟು, ಮ್ಯಾಸೀವ್ ಹೆಮೋರೇಜ್ ಅಂಡ್ ಎಕ್ಸೆಸೀವ್ ಬ್ಲೀಡಿಂಗ್ ಈಸ್ ದಿ ಕಾಸ್ ಆಫ್ ಡೆತ್. ನಾಲ್ಕು, ನೋ ಡ್ರಗ್ಸ್, ನೋ ಆಲ್ಕೋಹಾಲ್, ನೋ ಟಾಕ್ಸಿಕ್ ಮ್ಯಾಟರ್, ನೋ ಅದರ್ ಇಂಟರ್ನಲ್ ಇಂಜುರೀಸ್, ನೋ ಸೆಕ್ಷುವಲ್ ಅಸಾಲ್ಟ್, ನೋ ಸ್ಟೇಯ್ನ್ಸ್, ನಥಿಂಗ್... ಐದು, ಟೈಮ್ ಆಫ್ ಡೆತ್ ಸುಮಾರು ಬೆಳಿಗ್ಗೆ ಒಂಬತ್ತೂವರೆಯಿಂದ ಹತ್ತೂವರೆ. ಈಗ ಬಾಡಿ ಪ್ರಿಪೇರ್ ಮಾಡ್ತಾ ಇದ್ದೀವಿ... ಇನ್ನರ್ಧ ಗಂಟೆಗೆ ಹ್ಯಾಂಡೋವರ್ ಮಾಡ್ತೀವಿ.'

'ಥ್ಯಾಂಕ್ಯು ಡಾಕ್ಟರೆ.'

'ಆದರೆ ಒಂದು ಅರ್ಥವಾಗದ ವಿಷಯ ಇದೆ ಮಾಯಣ್ಣ.'

'ಏನದು ಡಾಕ್ಟರೇ...'

'ಬಲಗೈ ಹೆಬ್ಬೆರಳಿನ ತುದಿಯಲ್ಲಿ ಒಂದು ದಬ್ಬಳದ ಮೊನೆಯಿಂದ ಚುಚ್ಚಿದಂಥ ಗಾಯವಿದೆ. ಅದು ಏನು ಅಂತ ಗೊತ್ತಾಗಲಿಲ್ಲ.'

'ಅದನ್ನ ರಿಪೋರ್ಟ್‌ನಲ್ಲಿ ಮೆನ್ಷನ್ ಮಾಡಿದ್ರೆ ಆಯಿತು. ಅದರ ಬಗ್ಗೆ ಆಮೇಲೆ ನೋಡೋಣ ಬಿಡಿ. ಥ್ಯಾಂಕ್ಯು ಎನಿವೇ...'

ಮಾಯಣ್ಣ ಫೋನ್ ಕರೆ ಕತ್ತರಿಸಿ,

'ವಿನಯ್ ಕೇಳುಸ್ತಲ್ವ ಡಾಕ್ಟರ್ ಹೇಳಿದ್ದು?'

'ಯೆಸ್ ಸಾರ್... ಕಾಂಕ್ರೀಟಲ್ಲಿ ಹಾಕ್ತಾರಲ್ಲಾ ಕಂಬಿ... ಆ ತರದ ಒಂದು ದಪ್ಪನೆಯ ತುಂಡು ಕಂಬಿ ಇರಬಹುದು. ಯಾಕಂದ್ರೆ ಸ್ಕ್ರೂನೋ ಸುರುಳಿನೋ ತರ, ಗಾಯದ ಜಾಗದಲ್ಲಿ ಅಚ್ಚು ಬಿದ್ದಿತ್ತು ಅಂದ್ರು.'

'ಇರಬಹುದು ಅಥವಾ ಯಾವುದೋ ಥ್ರೆಡ್ ಇರುವಂತಹ ಮೆಶೀನ್ ಪಾರ್ಟ್ ಇರಬಹುದು. ಆ ತರದ್ದು ಏನೂ ಸಿಗಲಿಲ್ವಾ ಕ್ರೈಮ್ ಸ್ಪಾಟ್‌ನಲ್ಲಿ?'

'ಇಲ್ಲ ಸಾರ್... ನೀವು ಹೇಳಿದ ರೀತೀಲೇ ಇಡೀ ಜಾಗನ ಚೌಕಳಿಗಳಾಗಿ ವಿಂಗಡಣೆ ಮಾಡಿ ಒಂದೊಂದೇ ಚೌಕಳಿನ, ಒಂದಾದರ ಮೇಲೆ ಒಂದು, ಹೀಗೆ ಒಂದೂ ಬಿಡದಂಗೆ, ನಾನೂ, ಭುಜಂಗ ಆಮೇಲೆ ಕುಂಭಯ್ಯ ಶೋಧನೆ ಮಾಡ್ಬಿಟ್ಟಿದ್ದೀವಿ ಸಾರ್.'

'ಹಾಗಾದರೆ ಕೊಲೆ ಆಯುಧ ಕೊಲೆಗಾರನ ಜೊತೆನೇ ವಾಪಸ್ ಹೋಗಿದೆ.'

'ವಿನಯ್, ಆ ಸಿತಾರ ಅವರನ್ನ ಮತ್ತೆ ಕರೆಸಿ.'

'ಆ ಓನರ್ ಮನೆಗೇ ಬರೋದುಕ್ಕೆ ಹೇಳ್ಲಾ ಸಾರ್?'

'ಆಯ್ತು... ಇನ್ನು ಇಪ್ಪತ್ತು ನಿಮಿಷದಲ್ಲಿ.'

'ಯೆಸ್ ಸಾರ್.'

ಕೊಲೆ ನಡೆದ ಬಿಲ್ಡಿಂಗ್ ತಲುಪಿದಾಗ ಸಿತಾರ ಆಗಲೇ ಓನರ್ ಮನೆಯ ಒಳಗೆ ಹಾಲ್‌ನಲ್ಲಿ ಕುಳಿತು ಕಾಫಿ ಕುಡೀತಿದ್ದಳು. ಆಕೆಯ ಮನಸ್ಥಿತಿ ಇನ್ನೂ ತಹಬದಿಗೆ ಬಂದ ಹಾಗಿರಲಿಲ್ಲ. ವೆಂಕಟರಾಮಯ್ಯ ಒಳಗಿನ ಕೋಣೆಯಲ್ಲಿ ಬಳಲಿದಂತೆ ಚಾಚಿಕೊಂಡಿದ್ದರು, ಇವರಿಗೂ ಸಹಾ ಕಾಫಿ ತಂದರು ಸತ್ಯವತಿ, ವಿನಯ್ ರೆಕಾರ್ಡರ್ ಆನ್ ಮಾಡಿ ಪಕ್ಕದಲ್ಲೇ ಕೂತ.

'ಈ ರವೀ, ಜಯಂತ್, ಡೈರೆಕ್ಟರ್ ಇವರೆಲ್ಲಾ ಹೇಗೆ... ಸಿತಾರ ಅವರೇ?'

'ನನಗೆ ಇವರ್ಯಾರ ಜೊತೆನೂ ನೇರ ಸಂಪರ್ಕ ಇಲ್ಲ ಸಾರ್.'

'ಅಮ್ಮು ಇವರುಗಳ ಬಗ್ಗೆ ಸಾಕಷ್ಟು ಹೇಳಿರಬಹುದೇನೋ ನಿಮ್ಮ ಜೊತೆ.'

'ರವಿ, ಅಮ್ಮುಗೆ ಸಂಬಂಧಿ ಅಲ್ಲವೇ?'

'ಹೌದು... ಅಮ್ಮು ಅವರ ಮಲತಾಯಿ ವಿಜಯಮ್ಮ ಇದ್ದಾರಲ್ಲಾ, ಅವರ ಸ್ವಂತ ತಮ್ಮ – ರವಿ, ವಯಸ್ಸು ಮೂವತ್ತಾದ್ರು, ರೆಗ್ಯುಲರ್ ಕೆಲಸ ಅಂತ ಏನು ಇಲ್ಲ. ಉಂಡಾಡಿ ಗುಂಡ, ಹುಂಬ ಅಂತಾರಲ್ಲ ಹಾಗೆ. ಎಲ್ಲಾ ತರ ಹ್ಯಾಬಿಟ್‌ಗಳೂ ಇವೆ, ಯಾವಾಗಲೂ ಒಂದಷ್ಟು ಫ್ರೆಂಡ್ಸ್ ಜೊತೆ ಸುತ್ತಾಡ್ಕೊಂಡಿರ್ತಾನೆ ಅಂತಿದ್ರು. ಅಮ್ಮೂ ಅವನನ್ನ ಎಸ್ಟೇಟ್‌ನಲ್ಲೇ ಇರೋದುಕ್ಕೆ ಯಾಕೆ ಒಪ್ಕೊಂಡಿದ್ರೂ ಅಂದರೆ, ಎಸ್ಟೇಟ್ ಬಂಗಲೋನಲ್ಲಿ ವಿಜಯಮ್ಮ ಮತ್ತು ಮಕ್ಕಳು ಮಾತ್ರ ಇರೋದು, ಅವರಿಗೆ ಒತ್ತಾಸೆಯಾಗಿರಲಿ ಅಂತ ಅಷ್ಟೇ. ಪ್ರತಿ ತಿಂಗಳೂ ಒಂದಷ್ಟು ಪಾಕೆಟ್ ಮನಿ ತರ ಸಿಕ್ತಿತ್ತು. ಆದರೆ ಅವನಿಗಿರೋ ಹ್ಯಾಬಿಟ್ಸ್‌ಗೆ ಅದು ಸಾಲ್ತಿರಲಿಲ್ಲ ಅನ್ಸುತ್ತೆ. ಒಂದು ಸಾರಿ ಆತ, ಅಮ್ಮು ಹತ್ತಿರ ಸಿಕ್ಕಾಪಟ್ಟೆ ಬೈಸ್ಕೊಂಡಿದ್ದ.'

'ಯಾಕೆ?'

'ಎಲ್ಲಾ ಕಡೆ, ನಾನೂ ಮತ್ತು ಅಮೃತಾ, ಮದುವೆ ಆಗೋದು ಅಂತ ನಿಶ್ಚಯಿಸಿದ್ದೇವೆ ಅಂತ ಗುಲ್ಲೆಬ್ಬಿಸಿದ್ದ.'

'ಇಲ್ಲಿಗೂ ಬರ್ತಾ ಇದ್ದಾ ಹೇಗೆ?'

'ಏನಾದರೂ ಎಸ್ಟೇಟ್‌ನಿಂದ ತರೋದಿದ್ರೆ ಬರ್ತಿದ್ದಾ ಅಷ್ಟೇ. ಅವನನ್ನ ಅಮ್ಮು ಸಾಕಷ್ಟು ದೂರ ಇಟ್ಟಿದ್ದು.'

'ಇನ್ನು ಆ ಜಯಂತ್ ಅಮ್ಮೂನ ದಿನಾ ಭೇಟಿ ಮಾಡ್ತಿದ್ರಾ? ಒಬ್ಬರಿಗೊಬ್ಬರು ಹೇಗೆ ಪರಿಚಯ ಆದ್ರೂ?'

'ಜಯಂತ್ ಅವರದು ಹತ್ತಿರದಲ್ಲೇ ಒಂದು ಮೆಷಿನ್ ಟೂಲ್ಸ್ ಫ್ಯಾಕ್ಟರಿ ಇದೆ. ಡೈರೆಕ್ಟರ್ರು ಸೀರಿಯಲ್‌ನ ಒಂದು ಫ್ಯಾಕ್ಟರಿ ಸೀನ್ ಜಯಂತ್ ಅವರ ಫ್ಯಾಕ್ಟರಿನಲ್ಲಿ ಶೂಟ್ ಮಾಡಿದ್ರು. ಆಗಲೇ ಜಯಂತ್, ಅಮ್ಮೂಗೆ ಪರಿಚಯ ಆಗಿದ್ದು. ಅದಾದ್ಮೇಲೆ ಅದು ಹಾಗೆ ಬೆಳೆದು ಮದುವೆ ಆಗೊ ತೀರ್ಮಾನದ ತನಕನೂ ಬೆಳೀತು.'

'ಈ ನಡುವೆ ಇಬ್ಬರ ಮಧ್ಯೆ ತುಂಬಾ ಡಿಫರೆನ್ಸಸ್ ಬಂದಿತ್ತು ಅಂತಾ ಗೊತ್ತಾಯ್ತು.'

'ಅದೂ, ಅಮ್ಮು ಈ ಆ್ಯಕ್ಟಿಂಗ್ ಫೀಲ್ಡ್‌ನಲ್ಲೇ ಮುಂದುವರಿಯೋದು ಜಯಂತ್‌ಗೆ ಸ್ವಲ್ಪವೂ ಇಷ್ಟ ಇರಲಿಲ್ಲ. ಜೊತೆಗೆ ಆ ಡೈರೆಕ್ಟರ್ ದಿನೇಶ್ ಬೇರೆ, ಇವರಿಬ್ಬರನ್ನೂ ದೂರ ಮಾಡೋದುಕ್ಕೆ ಸಾಕಷ್ಟು ಮಿಸ್ಚೀಫ್ ಮಾಡ್ತಿದ್ರು.'

'ಅವರಿಗೆ ಅಮ್ಮು ಬಗ್ಗೆ ಆಸಕ್ತಿ ಇತ್ತೇನೋ?'

'ಡೆಫಿನೇಟ್ಲಿ ಸಾರ್. ಅಮ್ಮು ಹೆಸರಲ್ಲಿರೋ ಆಸ್ತಿಪಾಸ್ತಿಯನ್ನೆಲ್ಲಾ ಅಂದಾಜು ಮಾಡಿ, ಒಂದು ಮಾಸ್ಟರ್ ಪ್ಲಾನ್ ಮಾಡಿದ್ದ ಅನ್ಸುತ್ತೆ, ರೀಸೆಂಟಾಗಿ ಅಮ್ಮೂಗೆ ಒಂದು ಫಿಲ್ಮ್ ಆಫರ್ ಬರೋ ಹಾಗೆ ಮಾಡಿದ್ದು, ಜಯಂತ್‌ನ ಡಿಸ್ಟರ್ಬ್ ಮಾಡೋದುಕ್ಕೆ ಅಂತಾನೆ ಅನ್ಸುತ್ತೆ.'

'ಇಷ್ಟು ಹೇಳುದ್ರೂ, ಈ ಆ್ಯಕ್ಟಿಂಗ್ ಫೀಲ್ಡ್‌ನಲ್ಲಿ, ಇನ್ನೂ ಆಳಕ್ಕೇ ಇಳಿತಿದ್ದಾರಲ್ಲ ಅಂತ ಅಮ್ಮು ಬಗ್ಗೆ, ಜಯಂತ್ ತುಂಬಾನೇ ಅಪ್ಸೆಟ್ ಆಗಿದ್ರು.'

(ಸಶೇಷ)




## ಪ್ರತಿಕ್ರಿಯೆ

**ಚಂದದ ಚಂದ್ರನ ಚೂರು**

'ಚಂದ್ರನ ಚೂರು' ಧಾರಾವಾಹಿ (ಆಲೂರು ದೊಡ್ಡನಿಂಗಪ್ಪ) ಚೆನ್ನಾಗಿ ಮೂಡಿಬಂತು. ಹಳ್ಳಿಯ ವೈಮನಸ್ಸು, ಮೇಲು ಕೀಳು ಜಾತಿಯ ಘರ್ಷಣೆ, ಮಲ್ಲಣ್ಣನ ದಬ್ಬಾಳಿಕೆಯಿಂದ ನಲುಗಿದ ಜೀವಗಳು... ಹೀಗೆ ಒಂದು ಹಳ್ಳಿಯ ಜೀವನದ ಕಥೆಯೊಂದಿಗೆ ಧಾರಾವಾಹಿ ಗಮನಸೆಳೆಯಿತು. ಜೊತೆಗೆ ಮೋನಪ್ಪ ಅವರ ಕಲೆ ತುಂಬಾ ಚೆನ್ನಾಗಿ ಮೂಡಿಬಂದಿದೆ.

–ಭಾರತೀ ಗಂಗಾಧರ್, ಬೆಂಗಳೂರು

**ಅರ್ಥಪೂರ್ಣ ಕಥೆ**

ಕಾದಂಬರಿ ಚೆನ್ನಾಗಿದೆ. ಕಾಲ ಎಷ್ಟೇ ಮುಂದುವರಿದಿದ್ದರೂ ಹಳ್ಳಿಯಲ್ಲಿ ನಡೆಯುವ ಜಾತಿ ತಾರತಮ್ಯ, ಅದರ ಶೋಷಣೆ ಎಲ್ಲ ಮನದಟ್ಟಾಗುವಂತೆ ಹೇಳುವ ದಾರಿ ಸ್ವಲ್ಪ ಬಳಸಾದರೂ ಲೇಖಕರು ಗುರಿ ಮುಟ್ಟುವುದರಲ್ಲಿ ಯಶಸ್ವಿಯಾಗಿದ್ದಾರೆ. ಪ್ರತಿ ಕಂತೂ ಅರ್ಥ ಮಾಡಿಕೊಂಡು ಅನುಭವಿಸುವ ರೀತಿಯಲ್ಲಿತ್ತು.

–ಉಷಾ ರಾಜೇರಾವ್, ಬೆಂಗಳೂರು